(ಇಂದು ದಿನಾಂಕಃ 10-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಎ.ಜಿ.ಹೆಚ್. ವಕೀಲರಿಂದಃ</u>**

ಅಪಘಾತವಾದ ದಿನ ನಾನು ನನ್ನ ತಮ್ಮನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ನನ್ನ ಹಿಂದೆ ನನ್ನ ತಾಯಿ ದ್ವಿಚಕ್ರ ವಾಹನದ ಮೇಲೆ ಕುಳಿತಿದ್ದರು. ಸದರಿಯವರಿಗೆ 70 ವರ್ಷ ಮೇಲ್ಪಟ್ಟು ವಯಸ್ಸಾಗಿತ್ತು ಎಂದರೆ ಸರಿ. ಅಪಘಾತ ರಾಷ್ಟ್ರೀಯ ಹೆದ್ದಾರಿಯಲ್ಲಿ ಆಗಿದೆ. ಆ ಸಮಯದಲ್ಲಿ ಸಾಕಷ್ಟು ವಾಹನಗಳು ರಾಷ್ಟ್ರೀಯ ಹೆದ್ದಾರಿಯ ಮೇಲೆ ಓಡಾಡುತ್ತಿದ್ದವು ಎಂದರೆ ಸರಿ. ಅಪಘಾತಕ್ಕೆ ಸಂಬಂಧಪಟ್ಟಂತೆ ನನ್ನ ತಮ್ಮ

ರಘು ಪ್ರಥಮ ವರ್ತಮಾನ ಹೇಳಿಕೆಯನ್ನು ಕೊಟ್ಟಿದ್ದಾನೆ. ಅಪಘಾತವಾದ ದಿನ ಲಾರಿ ನಮ್ಮ ಹಿಂದಿನಿಂದ ಬಂದಿದೆ. ಲಾರಿ ಬರುವುದನ್ನು ನಾನು ನೋಡಿಲ್ಲ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿ ನಾಲ್ಕು ಪಥವುಳ್ಳ ರಸ್ತೆ ಎಂದರೆ ಸರಿ. ಮಧ್ಯದಲ್ಲಿ ರಸ್ತೆ ವಿಭಜಕ ಇದೆ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ನನಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಸೂಕ್ತ ಚಾಲನಾ ಪರವಾನಿಗೆ ಇರಲಿಲ್ಲ ಅನ್ನುವುದು ಸರಿಯಲ್ಲ. ನಾನು ಆ ದಿನ ಹೆಲ್ಮೆಟ್ ಹಾಕಿರಲಿಲ್ಲ ಅನ್ನುವುದು ಸರಿಯಲ್ಲ. ನನ್ನ ಮಾಲಿಕತ್ವದಲ್ಲಿ ಒಂದು ದ್ವಿಚಕ್ರ ವಾಹನ ಇದೆ. ನಾನು ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಪ್ರಾರಂಭಿಸಿ 10 ವರ್ಷಗಳು ಆಗಿವೆ. ಆ ದಿನ ನಾನು ದ್ವಿಚಕ್ರ ವಾಹನವನ್ನು ಸ್ವಲ್ಪ ವೇಗವಾಗಿ ಓಡಿಸುತ್ತಿದ್ದು ನಿಯಂತ್ರಣ ತಪ್ಪಿ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನಗೆ ಸರಿಯಾಗಿ ದ್ವಿಚಕ್ರ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ, ಮತ್ತು ನನಗೆ ಸೂಕ್ತ ಚಾಲನಾ ಪರವಾನಿಗೆ ಇರಲಿಲ್ಲ ಅನ್ನುವುದು ಸರಿಯಲ್ಲ. ಲಾರಿ ಆ ದಿನ ವೇಗವಾಗಿ ಮತ್ತು ಅಜಾಗರೂಕತೆಯಿಂದ ಹಿಂದಿನಿಂದ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ಪರಿಹಾರ ಧನ ಬರಲಿ ಎಂದು ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಲಾರಿಯ ಚಾಲಕನ ಕಾರವಾರದವನು ಎಂದರೆ ಗೊತ್ತಿಲ್ಲ. ಲಾರಿಯ ಚಾಲಕ ಇದೇ ಊರಿನವನಾಗಿದ್ದರಿಂದ ಅವನಿಗೆ ಹೇಳಿಸಿ ಕ್ರಿಮಿನಲ್ ಕೇಸಿನಲ್ಲಿ ತಪ್ಪೊಪ್ಪಿಗೆ ಮಾಡಿಸಿದ್ದೇವೆ ಅನ್ನುವುದು ಸರಿಯಲ್ಲ. ಲಾರಿ ಯಾರ ಮಾಲಿಕತ್ವದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದಿಂದ ಅಪಘಾತವಾದ ನಂತರ ನನಗೆ ನೋಟಿಸ್ ಬಂದಿಲ್ಲ. ಲಾರಿ ಚಾಲಕನಿಗೆ ಚಾಲನಾ ಪರವಾನಿಗೆ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಲಾರಿಯ ಚಾಲಕನಿಗೆ ಸೂಕ್ತ ಚಾಲನಾ ಪರವಾನಿಗೆ ಇರಲಿಲ್ಲ, ಆದ್ದರಿಂದ ವಿಮೆ ಷರತ್ತಿನ ಉಲ್ಲಂಘನೆಯಾಗಿದ್ದರಿಂದ 2 ನೇ ಎದುರುದಾರರು ಪರಿಹಾರ ಧನ ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಲಾರಿ ಚಾಲಕ

ಮಧ್ಯಪಾನ ಮಾಡಿ ಲಾರಿ ಚಾಲನೆ ಮಾಡಿದ್ದರಿಂದ ವಿಮಾ ಪಾಲಿಸಿಯ ಷರತ್ತುಗಳು ಉಲ್ಲಂಘನೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಬಿಣಗಾದ ಗ್ರಾಸಿಂ ಇಂಡಸ್ಟ್ರೀಯಲ್ಲಿ ಕೆಲಸ ಮಾಡುತ್ತಿದ್ದೇನೆ. ಇವತ್ತು ನಾನು ರಜೆ ಹಾಕಿ ಬಂದಿಲ್ಲ, ಆದರೆ ಇವತ್ತು ನನಗೆ ವಾರದ ರಜೆ ಇದೆ ಎಂದು ಹೇಳುತ್ತಾರೆ. ನಾನು ಐ.ಟಿ.ಐ. ಓದಿದ್ದೇನೆ. ನನ್ನ ಜನ್ಮ ದಿನಾಂಕ 19-12-1982. ನನ್ನ ಜನ್ಮ ದಿನಾಂಕ ತೋರಿಸಲು ದಾಖಲಾತಿಗಳು ಇವೆ. ನಾನು ಅಪಘಾತದ ಸಮಯದಲ್ಲಿಯೂ ಸಹ ಬಿಣಗಾದ ಗ್ರಾಸಿಂ ಇಂಡಸ್ಟ್ರೀಯಲ್ಲಿ ಕೆಲಸ ಮಾಡುತ್ತಿದ್ದೆ. ಸದರಿ ಇಂಡಸ್ಟ್ರೀಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ಗುರುತಿನ ಚೀಟಿ ಇದೆ. ನಾನು ಕಾರವಾರದ ಜಿಲ್ಲಾ ಆಸ್ಪತ್ರೆಯಲ್ಲಿ ಮಾತ್ರ ಚಿಕಿತ್ಸೆ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಮಂಗಳೂರಿನ ಎ.ಜೆ. ಆಸ್ಪತ್ರೆಯಲ್ಲಿ ತೆಗೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ನಾನು ತೆಗೆದುಕೊಂಡಂತಹ ಚಿಕಿತ್ಸೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಈಗಾಗಲೇ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನಾನು ಐದು ಲಕ್ಷ ರೂಪಾಯಿಯ ಚಿಕಿತ್ಸೆ ತೆಗೆದುಕೊಂಡಿದ್ದೇನೆ ಎಂದು ತೋರಿಸುವ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡಿದ್ದು ಮತ್ತು ವಿಶೇಷ ಆಹಾರ ಸೇವನೆ ಮಾಡಲು ಹಣ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎ.ಜೆ. ಆಸ್ಪತ್ರೆಯ ಫೈನಲ್ ನಂ. ಎಫ್.ಬಿ.ಎಂ.ಆರ್.230016221, ದಿನಾಂಕ 06-03-2024 ಹಾಜರುಪಡಿಸಿದ್ದು ಅದರ ಮೇಲೆ ಡುಪ್ಲಿಕೇಟ್ ಎಂದು ನಮೂದಾಗಿದೆ ಎಂದರೆ ಸರಿ. ನಮ್ಮ ಗ್ರಾಸಿಂ ಇಂಡಸ್ಟ್ರೀ, ಬಿಣಗಾ ಇವರಿಂದ ಔಷಧಿ ಬಿಲ್ಲುಗಳ ಮರುಪಾವತಿಯಾಗಿದೆ ಎಂದರೆ ಸಾಕ್ಷಿ ಸಂಪೂರ್ಣವಾಗಿ ಆಗಿಲ್ಲ ಎಂದು ಹೇಳುತ್ತಾರೆ. ನಾನು ಖಾಸಗಿಯಾಗಿ ಮೂರು ಲಕ್ಷ ರೂಪಾಯಿಗಳಿಗೆ ಇನ್ಸೂರೆನ್ಸ ಮಾಡಿಸಿದ್ದೆ. ಅದು ಮರುಪಾವತಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎ.ಜೆ. ಆಸ್ಪತ್ರೆಯ ಫೈನಲ್ ನಂ. ಎಫ್.ಬಿ.ಎಂ.ಆರ್.230016221, ದಿನಾಂಕ

06-03-2024 ಹಾಜರುಪಡಿಸಿದ್ದು ಅದರ ಮೇಲೆ ಎಸ್.ಬಿ.ಐ. ಜನರಲ್ ಇನ್ಸೂರೆನ್ಸ ಕಂಪನಿ ವಿಡಾಲ್ ಹೆಲ್ತ್ ಟಿ.ಪಿ.ಎ. ಪ್ರೈವೆಟ್ ಲಿಮಿಟೆಡ್ ಎಂದು ನಮೂದಿಸಲಾಗಿದೆ ಎಂದರೆ ಸರಿ. ಆದ್ದರಿಂದ 2 ನೇ ಎದುರುದಾರರು ಪರಿಹಾರ ಧನ ಕೊಡಲು ಬಾಧ್ಯಸ್ಥರಲ್ಲ ಅನ್ನುವುದು ಸರಿಯಲ್ಲ. ನನ್ನ ವೇತನ ಪ್ರಮಾಣಪತ್ರದ ಪ್ರಕಾರ ಸಪ್ಟೆಂಬರ್ 2023 ರಲ್ಲಿ ರೂ. 49,481-00 ವೇತನ ಇದೆ ಎಂದರೆ ಸರಿ. ಹೋದ ತಿಂಗಳು ನಾನು ಎಷ್ಟು ಸಂಬಳ ತೆಗೆದುಕೊಂಡಿದ್ದೆ ಎಂದು ನನಗೆ ಹೇಳಲು ಬರುವುದಿಲ್ಲ. ಅಪಘಾತದಲ್ಲಿ ಆದಂತಹ ಗಾಯಗಳಿಂದ ನನಗೆ ಯಾವುದೇ ತೊಂದರೆ ಆಗಿಲ್ಲ, ಮುಂಚಿನ ಹಾಗೆ ನಾನು ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಕೇವಲ ಪರಿಹಾರ ಧನ ಬರಲಿ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ 1 ನೇ ಎಂ.ಎ.ಸಿ.ಟಿ. ಕಾರವಾರ